ಮೂಲ ದಾವಾ ಸಂಖ್ಯೆ 19/2016

ಪಿ.ಡಬ್ಲ್ಯೂ–1

**<u>ದಿಃ 05.12.2022 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.</u>**

**<u>ಪಾಟೀ ಸವಾಲುಃ 2 ನೇ ಪ್ರತಿವಾದಿಪರ ಶ್ರೀ ಬಿ ಕೆ ಎಂ ವಕೀಲರಿಂದಃ –</u>**

ಸರ್ವೆ ನಂಬರ 539/ಬಿ ಹರಪನಹಳ್ಳಿ ಪಟ್ಟಣಕ್ಕೆ ಸಂಬಂಧಪಟ್ಟಂತೆ ಒಟ್ಟು ವಿಸ್ತೀರ್ಣ 186 ಎಕರೆ 6 ಸೆಂಟ್ಸ ಎಂದರೆ ಸರಿ. ಸದರಿ ಜಮೀನು ಟ್ಯಾಂಕ್ (ಕೆರೆ) ಪರಂಪೋಕ್ ಎಂದರೆ ಸರಿಯಲ್ಲ. ಡಿಪ್ಯೂಟಿ ಕಮೀಶನರ್ ಬಳ್ಳಾರಿ ಇವರು ಈ ಮೇಲಿನ ವಿಸ್ತೀರ್ಣದಲ್ಲಿ 170 ಎಕರೆ 65 ಸೆಂಟ್ಸ ಜಮೀನನ್ನು ಕರೆಗಾಗಿ ಮಿಸಲಿಡಿಸಿ ಇನ್ನೂ ಉಳಿದ 15 ಎಕರೆ 41 ಸೆಂಟ್ಸ ಕೋಟೆ ಪ್ರದೇಶ ಎಂದು 1962 ನೇ ಇಸ್ವಿಯಲ್ಲಿ ಆದೇಶ ಹೊರಡಿಸಿದೆ ಎಂದರೆ ನನಗೆ ಗೊತ್ತಿಲ್ಲಾ ಎನ್ನುತ್ತಾರೆ. ಅದರಲ್ಲಿ ಕಾಳಮ್ಮ ದೇವಸ್ಥಾನಕ್ಕೆ 6 ಎಕರೆ 48 ಸೆಂಟ್ಸ ವಿಸ್ತೀರ್ಣ ಅಂದರೆ ಸರ್ವೆ ನಂಬರ 734, 1 ಎಕರೆ 64 ಸೆಂಟ್ಸ, ಸರ್ವೆ ನಂಬರ 738 ರಲ್ಲಿ 2 ಎಕರೆ 07 ಸೆಂಟ್ಸ, ಸರ್ವೆ ನಂಬರ 739, 2 ಎಕರೆ 01 ಸೆಂಟ್ಸ, ಸರ್ವೆ ನಂಬರ 740/1, 0.16 ಸೆಂಟ್ಸ, ಸರ್ವೆ ನಂಬರ 740/2, 0.60 ಸೆಂಟ್ಸ ಒಟ್ಟು 6 ಎಕರೆ 48 ಸೆಂಟ್ಸ ಈ ವಿಸ್ತೀರ್ಣದ ಜಮೀನನ್ನು ಕಾಳಮ್ಮ ದೇವಸ್ಥಾನಕ್ಕೆ ಡೆಪ್ಯೂಟಿ ಕಮೀಶನರ್ ಬಳ್ಳಾರಿ ರವರು ದಿನಾಂಕ 12.06.1962 ರಂದು ಆದೇಶ ಹೊರಡಿಸಿದ್ದಾರೆ ಎಂದರೆ ಗೊತ್ತಿಲ್ಲಾ. ಅದೇ ರೀತಿ ಕೋಟೆ ಆಂಜನೇಯ ದೇವಸ್ಥಾನಕ್ಕೆ ಸರ್ವೆ ನಂಬರ 736 1 ಎಕರೆ 30 ಸೆಂಟ್ಸ , ಸರ್ವೆ ನಂಬರ 737/1 , 1 ಎಕರೆ 35 ಸೆಂಟ್ಸ, ಸರ್ವೆ ನಂಬರ 737/2, 0.40 ಸೆಂಟ್ಸ, ಸರ್ವೆ ನಂಬರ 741/1, 0.29 ಸೆಂಟ್ಸ, ಸರ್ವೆ ನಂಬರ 741/2, 0.62 ಸೆಂಟ್ಸ, ಸರ್ವೆ ನಂಬರ 742, 0.88 ಸೆಂಟ್ಸ, ಸರ್ವೆ ನಂಬರ 743, 0.80 ಸೆಂಟ್ಸ, ಸರ್ವೆ ನಂಬರ 744, 0.70 ಸೆಂಟ್ಸ ಒಟ್ಟು 6 ಎಕರೆ 4 ಸೆಂಟ್ಸ ಆಂಜನೇಯ ಸ್ವಾಮಿ ದೇವಸ್ಥಾನಿನಕ್ಕೆ ಮೀಸಲು ಇಡಿಸಿದ ವಿಸ್ತೀರ್ಣ ಆಗಿದೆ ಎಂದರೆ ಗೊತ್ತಿಲ್ಲ. ಅದೇ ರೀತಿ ಸರ್ವೆ ನಂಬರ 735 ರಲ್ಲಿ 1 ಎಕರೆ 95 ಸೆಂಟ್ಸ, ಸರ್ವೆ ನಂಬರ 745 ರಲ್ಲಿ 0.96 ಸೆಂಟ್ಸ ಒಟ್ಟು 2 ಎಕರೆ 89 ಸೆಂಟ್ಸ ನ್ನು ಜೈನ ಬಸದಿಗಾಗಿ ಮಂಜೂರು ಮಾಡಿದ್ದಾರೆ ಎಂದರೆ ಗೊತ್ತಿಲ್ಲಾ ಎನ್ನುತ್ತಾರೆ. ಸರ್ವೆ ನಂಬರ

539/ಬಿ/1 ಬಿ ರಲ್ಲಿ ದಿನಾಂಕ 20.11.1999 ರಂದು ಬೇಲ್ದಾರ ಲಕ್ಷ್ಮಪ್ಪ ರವರಿಂದ 1 ನೇ ವಾದಿಯ ಹೆಸರಿಗೆ ಖರೀದಿ ಹೊಂದಿದೆ ಎಂದು ಹೇಳುತ್ತೀರಲ್ಲಾ ಆ ರೀತಿ ಜಮೀನು ಅಸ್ತಿತ್ವದಲ್ಲಿ ಇಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಪಟ್ಟ ಇದೆ ಎಂದು ಹೇಳುತ್ತಾರೆ. ಸರ್ವೆ ನಂಬರ 539 ಬಿ ಒಟ್ಟು ವಿಸ್ತೀರ್ಣ 186 ಎಕರೆ ಒಳಗೆ 170.65 ಎಕರೆ ಕೆರೆಗೆ ಸಂಬಂಧಪಟ್ಟಿದ್ದು ಉಳಿದ 15 ಎಕರೆ 41 ಸೆಂಟ್ಸ ವಿಸ್ತೀರ್ಣ ಭೂಮಿ 1962 ನೇ ಇಸ್ವಿಯಲ್ಲಿ ಜಿಲ್ಲಾಧಿಕಾರಿ ಬಳ್ಳಾರಿ ಇವರು ಈ ಗಾಗಲೇ ಕಾಳಮ್ಮ ದೇವಸ್ಥಾನಕ್ಕೆ ಕೋಟೆ ಆಂಜನೇಯ ದೇವಸ್ಥಾನಕ್ಕೆ ಮತ್ತು ಜೈನ ಬಸದಿಗೆ ಮಂಜೂರು ಮಾಡಿರುವುದರಿಂದ ಸರ್ವೆ ನಂಬರ 539 ಬಿ/1 ಬಿ ರಲ್ಲಿ ಯಾವುದೇ ವಿಸ್ತೀರ್ಣದ ಜಮೀನು ಉಳಿದಿರಲಿಲ್ಲ ಎಂದರೆ ಗೊತ್ತಿಲ್ಲಾ. ನೀವು ಹೇಳುವ ಪ್ರಕಾರ ನಿಮ್ಮ ಹೆಂಡತಿಗೆ ಖರೀದಿ ಪತ್ರ ಆಗುವ ಮೊದಲು ಬೇಲ್ದಾರ ಲಕ್ಷ್ಮಯ್ಯ ರವರಿಗೆ ಸರ್ವೆ ನಂಬರ 539/ಬಿ ಅಥವಾ ಸರ್ವೆ ನಂಬರ 539/1 ಬಿ ರಲ್ಲಿ ಯಾವುದೇ ಆಸ್ತಿಯ ಹಕ್ಕು ಪ್ರಾಪ್ತ ವಾಗಿರುವುದಿಲ್ಲ ಎಂದರೆ ಸರಿಯಲ್ಲ. ನೀವು ಖರೀದಿ ಮಾಡಿದ ಆಸ್ತಿ ಸರ್ವೆ ನಂಬರ ನಲ್ಲಿ ಖರೀದಿ ಮಾಡಿದ್ದಿರೋ ಅಥವಾ ಖಾಲಿ ನಿವೇಶನದಲ್ಲಿ ಖರೀದಿ ಮಾಡಿದ್ದೀರಾ ಎಂದರೆ ಸರ್ವೆ ನಂಬರನಲ್ಲಿ ಇದ್ದುದ್ದನ್ನು ಖರೀದಿ ಮಾಡಿದ್ದೇವೆ ಎನ್ನುತ್ತಾರೆ. ಎಷ್ಟು ಸೆಂಟ್ಸ ಜಮೀನು ಖರೀದಿ ಮಾಡಿದ್ದೀರಾ ಎಂದರೆ ಸಾಕ್ಷಿ 10 ಸೆಂಟ್ಸ ಜಮೀನನ್ನು ಖರೀದಿ ಮಾಡಿದ್ದೇನೆ ಎನ್ನುತ್ತಾರೆ. ನೀವೇನಾದರು ವಾದ ಪತ್ರದ ಶೆಡ್ಯೂಲ್ ನಲ್ಲಿ ಸರ್ವೆ ನಂಬರ 539/ಬಿ/1 ಬಿ ರ ಜಮೀನಿನಲ್ಲಿ 10 ಸೆಂಟ್ಸ ಖರೀದಿ ಮಾಡಿದ ಬಗ್ಗೆ ತೋರಿಸಿದ್ದೀರಾ ಎಂದರೆ ತೋರಿಸಿದ್ದೇನೆ ಎನ್ನುತ್ತಾರೆ. ಸರ್ವೆ ನಂಬರ 539/ಬಿ /1 ಬಿ ರ 10 ಸೆಂಟ್ಸ ಬಗ್ಗೆ ಈ ದಾವೆಯಲ್ಲಿ ನೀವು ಯಾವುದೇ ಪರಿಹಾರ ಕೋರಿರುವುದಿಲ್ಲ ಎಂದರೆ ಕೇಳಿದ್ದೇವೆ ಎನ್ನುತ್ತಾರೆ. ನೀವು ಆ ರೀತಿ ಸದರಿ ಸರ್ವೆ ನಂಬರ ನ 10 ಸೆಂಟ್ಸ ಜಮೀನಿನ ಬಗ್ಗೆ ಯಾವುದೇ ಪರಿಹಾರ ಕೋರದಿದ್ದರೂ ಕೂಡ ಈಗ ಸುಳ್ಳು ಹೇಳುತ್ತಿದ್ದೀರಾ ಎಂದರೆ ಸರಿಯಲ್ಲ. ನಿಮ್ಮ ಹೆಂಡತಿಯ ಹೆಸರಿನಲ್ಲಿ ಖರೀದಿ ಮಾಡಿದ್ದೇನೆ ಎಂದು ಹೇಳುತ್ತಿರುವ ಜಮೀನು ವ್ಯವಸಾಯದ ಭೂಮಿ

ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ವ್ಯವಸಾಯೇತರ ಭೂಮಿ ಖರೀದಿ ಮಾಡಿದ್ದೇನೆ ಎನ್ನುತ್ತಾರೆ. ನೀವು ನ್ಯಾಯಾಲಯಕ್ಕೆ ಹಾಜರುಪಡಿಸಿರುವ ನಿ ಪಿ 1 ರ ಕ್ರಯ ಪತ್ರದಲ್ಲಿ ಯಲ್ಲಿಯಿಯೂ ಕೂಡ ನೀವು ಖರೀದಿ ಮಾಡಿದ್ದೇನೆಂದು ಹೇಳುವ ಜಮೀನು ವ್ಯವಸಾಯೇತರ ಭೂಮಿ ಎಂದು ನಮೂದು ಮಾಡಿರುವುದಿಲ್ಲ ಎಂದು ಹೇಳಿದ್ದಕ್ಕೆ ಸಾಕ್ಷಿಯು ನನಗೆ ಸದರಿ ವಿಚಾರ ಗೊತ್ತಿಲ್ಲಾ ಎನ್ನುತ್ತಾರೆ. ನಿಮ್ಮ ಹೆಂಡತಿಯ ಹೆಸರಿನಲ್ಲಿ ಸದರಿ 10 ಸೆಂಟ್ಸ ಜಮೀನು ಖರೀದಿ ಮಾಡಿದ ನಂತರ ಕಾನೂನಿನ ಪ್ರಕಾರ ಸದರಿ ಆಸ್ತಿಯನ್ನು ವ್ಯವಸಾಯೇತರ (ನಾನ್ ಅಗ್ರಿಕಲ್ಚರ್ ಲ್ಯಾಂಡ್) ಉದ್ದೇಶಕ್ಕಾಗಿ ಪರಿವರ್ತನೆ ಆದೇಶವನ್ನು ಜಿಲ್ಲಾಧಿಕಾರಿಯಿಂದ ಪಡೆದುಕೊಂಡಿದ್ದೀರಾ ಎಂದರೆ ಪಡೆದುಕೊಂಡಿರುವುದಿಲ್ಲ ಎನ್ನುತ್ತಾರೆ. ಸಾಕ್ಷಿ ಮುಂದುವರಿದು ಮುನ್ಸಿಪಾಲ್ಟಿಯಿಂದ ಡೋರ್ ನಂಬರ ಕೊಟ್ಟಿದ್ದಾರೆಂದು ಮುಂದುವರಿದು ಹೇಳುತ್ತಾರೆ. ದಾವೆ ಸಲ್ಲಿಸುವ ಮುನ್ನ ನೀವು ಈ ನ್ಯಾಯಾಲಯಕ್ಕೆ ನೀವು ಖರೀದಿ ಮಾಡಿದ್ದೇನೆಂದು ಹೇಳುವ ಜಮೀನಿನ ಪಹಣಿ ನಿ ಪಿ 8 ಹಾಜರುಪಡಿಸಿದ್ದೀರಾ ಎಂದರೆ ಸರಿ. ನಿ ಪಿ 8 ಈ ನಿ ಪಿ 8 ರ ದಾಖಲೆಯಲ್ಲಿ ನೀವು ಖರೀದಿ ಮಾಡಿದ್ದೇನೆಂದು ಹೇಳುವ ಆಸ್ತಿಯು ಏನಾದರು ಭೂ ಪರಿವರ್ತನೆಗೊಂಡ ಜಮೀನು ಎಂದು ಬರೆಯಲಾಗಿದೆಯಾ ಎಂದರೆ ಇಲ್ಲಾ ಎನ್ನುತ್ತಾರೆ. ನಿಮ್ಮ ದಾವೆಯಲ್ಲಿ ನೀವು ಬರೆದುಕೊಂಡಂತೆ ದಾವಾ ಆಸ್ತಿಗೆ ಹರಪನಹಳ್ಳಿ ಪುರಸಭೆಯವರು ಡೋರ್ ನಂಬರ ಕೊಟ್ಟ ಬಗ್ಗೆ ಮಾಡಿರುವ ಆದೇಶದ ಪ್ರತಿಯನ್ನು ಏನಾದರು ನ್ಯಾಯಾಲಯಕ್ಕೆ ಕೊಟ್ಟಿದ್ದೀರಾ ಎಂದರೆ ಕೊಟ್ಟಿದ್ದೇನೆ ಎನ್ನುತ್ತಾರೆ. ಯಾವ ವರ್ಷದಲ್ಲಿ ಆದೇಶ ಮಾಡಿದ್ದಾರೆ ಎಂದರೆ 2008 ರಲ್ಲಿ ಮಾಡಿದ್ದಾರೆ ಎನ್ನುತ್ತಾರೆ. ನೀವು ಸಲ್ಲಿಸಿರುವ ದಾಖಲೆಗಳಲ್ಲಿ ಯಾವುದು ಮುನ್ಸಿಪಾಲ್ಟಿ ಮಾಡಿರುವ ಆದೇಶದ ಪ್ರತಿ ತೋರಿಸಿ ಎಂದರೆ ಸಾಕ್ಷಿಯು ತನ್ನ ಪರವಾಗಿ ಹಾಜರುಪಡಿಸಿದ ದಾಖಲೆಗಳನ್ನು ಪರಿಶೀಲಿಸಿ ನೋಡಿ ನಿ ಪಿ 25 ನ್ನು ಮುನ್ಸಿಪಾಲ್ಟಿಯವರು ಕೊಟ್ಟ ದಾಖಲೆ ಎಂದು ಹೇಳುತ್ತಾರೆ. ನಿ ಪಿ 25 ಮುನ್ಸಿಪಾಲ್ಟಿಯವರು ಮನೆಯ ಡೋರ್ ನಂಬರ ಕೊಟ್ಟ ಬಗ್ಗೆ ಮಾಡಿದ ಆದೇಶ ಅಲ್ಲಾ ಎಂದರೆ

ಸರಿಯಲ್ಲ. ನಿ ಪಿ 25 ಮನೆ ಕಟ್ಟಡದ ಲೈಸೆನ್ಸ ಎಂದರೆ ಸರಿ. ನೀವು ಖರೀದಿ ಮಾಡಿದ್ದೇನೆಂದು ಹೇಳುವ ಆಸ್ತಿಯು ಹರಪನಹಳ್ಳಿ ಪುರಸಭೆಯ ವ್ಯಾಪ್ತಿಗೆ ಬರುವುದಿಲ್ಲ ಎಂದರೆ ಸರಿಯಲ್ಲ. ಸರ್ವೆ ನಂಬರ 539/ಬಿ ಅಥವಾ ಸರ್ವೆ ನಂಬರ 539/ಬಿ /1ಬಿ ಇದು ಕಂದಾಯ ಇಲಾಖೆಯ ಪರಿವ್ಯಾಪ್ತಿಗೆ ಬರುತ್ತದೆ ಎಂದರೆ ನನಗೆ ಗೊತ್ತಿಲ್ಲಾ ಎನ್ನುತ್ತಾರೆ. ಕಂದಾಯ ಅಧಿಕಾರಿಗಳಿಂದ ಮನೆ ಕಟ್ಟುವ ಮೊದಲು ನೀವೇನಾದರು ಲೈಸೆನ್ಸ ಪಡೆದಿದ್ದೀರಾ ಎಂದರೆ ಇಲ್ಲಾ. ದಾವಾ ಆಸ್ತಿಯು ಪುರಸಭೆ ವ್ಯಾಪ್ತಿಗೆ ಬರದಿದ್ದರೂ ಕೂಡ ಪುರಸಭೆಯ ಅಧಿಕಾರಿಗಳೊಂದಿಗೆ ಶಾಮೀಲಾಗಿ ನಿಮಗೆ ಅನುಕೂಲವಾಗುವಂತೆ ಕೆಲವು ಕಾಗದ ಪತ್ರಗಳನ್ನು ಸೃಕಷ್ಟಿ ಮಾಡಿಕೊಂಡಿದ್ದೀರಾ ಎಂದರೆ ಸರಿಯಲ್ಲ ನಿಮಗೆ ಪುರಸಭೆಯವರು ಯಾವುದೇ ಅಧಿಕೃತ ಆದೇಶವನ್ನು ಮಾಡಿ ಮನೆ ನಂಬರ ಮಂಜೂರು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ನಕಾಶೆ ಕೊಟ್ಟಿದ್ದಾರೆ ಎನ್ನುತ್ತಾರೆ.

**(ಮುಂದುವರಿದ ಪಾಟೀ ಸವಾಲಿಗೆ ಪ್ರತಿವಾದಿ ಪರ ವಕೀಲರು ಸಮಯ ಕೋರಿದ್ದು ಅನುಮತಿಸಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ .

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಹರಪನಹಳ್ಳಿ.